

ಡಾ. ಎಸ್. ರಾಮಮೂರ್ತಿ

# 11-8-2011 ರಿಂದ 17-8-2011 ರವರೆಗೆ



**ಮೇಷ**

ವಾರದ ಮಧ್ಯಭಾಗದವರೆಗೂ ಅನುಕೂಲ. ತಂದೆಯಿಂದ ಸಹಾಯ. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವ್ಯಾಪಾರ ವಹಿವಾಟುಗಳಲ್ಲಿ ನಿರೀಕ್ಷಿಸಿದ ಲಾಭ. ಕುಟುಂಬದಲ್ಲಿ ಶಾಂತ ವಾತಾವರಣ. ಪ್ರಯಾಣದಲ್ಲಿ ನಿರಾತಂಕ. ಪತಿ ಪತ್ನಿಯರಲ್ಲಿ ಸೌಹಾರ್ದತೆ. ವಾರಾಂತ್ಯದಲ್ಲಿ ಅನಾರೋಗ್ಯ. ವಾಹನ ಯಂತ್ರೋಪಕರಣಗಳಿಂದ ತೊಂದರೆ, ಕಷ್ಟ. ಶುಭದಿನ: 14; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ



**ವೃಷಭ**

ಕೆಲಸ ಕಾರ್ಯಗಳಲ್ಲಿ ಅಲ್ಪಸ್ವಲ್ಪ ಒತ್ತಡಗಳಾದರೂ ಸಫಲವಾಗುವುವು, ಕ್ರಯ ವಿಕ್ರಯ ವ್ಯಾಪಾರದಲ್ಲಿ ನಿರೀಕ್ಷಿಸಿದ ಲಾಭ. ಮಕ್ಕಳಿಂದ ಹಾಗೂ ತಂದೆಯಿಂದ ಸಹಾಯ. ಭೂ ವ್ಯವಹಾರದಲ್ಲಿ ಪ್ರಗತಿ ಕಂಡುಬರುವುದು. ವಾದ ವಿವಾದಗಳಲ್ಲಿ ಯಶಸ್ಸು. ಯಂತ್ರಗಳು ಸರಾಗವಾಗಿ ನಡೆಯುವುದು. ಶುಭ ವಾರ್ತೆ. ಶುಭದಿನ: 17; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಆರಂಭದಲ್ಲಿ ಕೆಲಸ ಕಾರ್ಯ ಮಾಡಲು ನಿರಾಸಕ್ತಿ. ಆರೋಗ್ಯದಲ್ಲಿ ವ್ಯತ್ಯಾಸ, ಲೇವಾದೇವಿಗಳಲ್ಲಿ ಹಾನಿ, ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ವಿರೋಧಿಗಳಿಂದ ಉಪದ್ರವ. ಲೆಕ್ಕಪತ್ರಗಳಲ್ಲಿ ಗೊಂದಲ. ವಾರದ ಮಧ್ಯಭಾಗದಿಂದ ಚೇತರಿಕೆ. ಕಾರ್ಯಸಾಧನೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ, ಆಪ್ತರಿಂದ ಗೌರವ ಪ್ರಾಪ್ತಿ. ಶುಭದಿನ: 16; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಆರಂಭದಲ್ಲಿ ಸಂತಸ. ಕೆಲಸ ಕಾರ್ಯಗಳಲ್ಲಿ ಸಫಲತೆ. ಕ್ರಯ ವಿಕ್ರಯ ವ್ಯಾಪಾರ ವೃತ್ತಿಗಳಲ್ಲಿ ಪ್ರಗತಿ. ಪತಿ ಪತ್ನಿಯರಲ್ಲಿ ಒಮ್ಮತ. ಪ್ರೀತಿ ಪಾತ್ರರ ಭೇಟಿ. ವಾಹನ ಖರೀದಿ ಯತ್ನ. ವಾರದ ಮಧ್ಯಭಾಗದಲ್ಲಿ ಬೇಸರ. ಮಿತ್ರರಿಂದ ಒತ್ತಡ. ನಿರೀಕ್ಷೆಗೂ ಮೀರಿದ ಖರ್ಚು. ಉದ್ಯೋಗದಲ್ಲಿ ಅಶಾಂತಿ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 12; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಮಧ್ಯಭಾಗದವರೆಗೂ ಮನಶಾಂತಿ. ಕೈ ಹಾಕಿದ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು. ವ್ಯಾಪಾರ ಕ್ಷೇತ್ರದಲ್ಲಿ ಪೈಪೋಟಿ ಇದ್ದರೂ ಲಾಭವಾಗುವುದು. ಶುಭ ಕಾರ್ಯಗಳು ಜರಗುವುವು. ದೈವಿಕ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ವಾರಾಂತ್ಯದಲ್ಲಿ ಒತ್ತಡ, ಲೆಕ್ಕಪತ್ರಗಳಲ್ಲಿ ತಪ್ಪುಗಳಾಗುವವು. ಶುಭದಿನ: 13; ಗಣಪತಿ, ಶಿವನ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಮಕ್ಕಳು ವಿಚಿತ್ರವಾಗಿ ವರ್ತಿಸುವರು. ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುವುವು. ನಷ್ಟ ಪ್ರಾಪ್ತಿ. ವಾರದ ಮಧ್ಯಭಾಗದಿಂದ ಸಂತಸ. ಮನೋಬಲವೃದ್ಧಿ. ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರ ರಂಗದಲ್ಲಿ ಹೆಚ್ಚಿನ ಲಾಭ. ಪತಿ ಪತ್ನಿಯರಲ್ಲಿ ಸಾಮರಸ್ಯ. ವಿರೋಧಿಗಳಿಗೆ ಹಿನ್ನಡೆ. ಮಾಡಿದ ತಪ್ಪಿನ ಅರಿವಾಗುವುದು. ಶುಭದಿನ: 16; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಆರಂಭದಲ್ಲಿ ಅಶಾಂತಿ, ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ಆದಾಯಕ್ಕಿಂತಲೂ ಅಧಿಕ ಖರ್ಚು. ಉದ್ಯೋಗ ವ್ಯಾಪಾರದಲ್ಲಿ ಹಿನ್ನಡೆ, ಮಾತೃವಿಗೆ ಕಷ್ಟ ನಷ್ಟ ಪ್ರಾಪ್ತಿ. ವಾರದ ಮಧ್ಯಭಾಗದಿಂದ ಮನಶಾಂತಿ. ಉತ್ಸಾಹ ಹೆಚ್ಚುವುದು. ಕೆಲಸ ಕಾರ್ಯಗಳಲ್ಲಿ ಪ್ರಗತಿ. ಕ್ರಯ ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ. ಪ್ರಯಾಣ ಸೌಖ್ಯ. ಶುಭದಿನ: 15; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಸುಖ ಸೌಖ್ಯ. ಬಂಧುಗಳಿಂದ ಪ್ರಶಂಸೆ. ಉದ್ಯೋಗದಲ್ಲಿ ಪ್ರಗತಿ, ವ್ಯಾಪಾರ ವಹಿವಾಟುಗಳಲ್ಲಿ ತಕ್ಕ ಲಾಭ. ತಂಟೆ ತಕರಾರುಗಳೆಲ್ಲ ದೂರವಾಗುವುವು. ವಾರದ ಮಧ್ಯಭಾಗದಲ್ಲಿ ಭಯ. ಕೆಲಸ ಕಾರ್ಯಗಳಲ್ಲಿ ನಿರಾಸಕ್ತಿ. ವ್ಯವಹಾರಗಳಿಗೆ ವಿಘ್ನ. ಕುಟುಂಬದಲ್ಲಿ ಕಲಹ, ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 12; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಮಧ್ಯಭಾಗದವರೆಗೂ ಅನುಕೂಲ. ಕೈ ಹಾಕಿದ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಏಜೆನ್ಸಿ ಲೇವಾದೇವಿಗಳಲ್ಲಿ ನಿರೀಕ್ಷಿತ ಲಾಭ. ಸ್ಪರ್ಧೆಗಳಲ್ಲಿ ಗೆಲುವು ಹಿರಿಯರಿಂದ ಸಹಾಯ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವಿಕೆ. ವಾರಾಂತ್ಯದಲ್ಲಿ ಅಶಾಂತಿ. ಪತಿ ಪತ್ನಿಯರಲ್ಲಿ ಮನಸ್ತಾಪ. ಉದ್ಯೋಗದಲ್ಲಿ ಹಿನ್ನಡೆ. ಸಾಲದ ಭಾದೆ. ಶುಭದಿನ: 13; ದುರ್ಗಾ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ



**ಮಕರ**

ಉದ್ಯೋಗದಲ್ಲಿ ಪ್ರಗತಿ ಕಂಡುಬರುವುದು. ವ್ಯಾಪಾರ ವೃತ್ತಿಗಳಲ್ಲಿ ಲಾಭಾಂಶ ಹೆಚ್ಚುವುದು. ವಿರೋಧಿಗಳು, ಹಿನ್ನಡೆಯುವರು. ಕ್ರೀಡೆಗಳಲ್ಲಿ ಮೇಲುಗೈ, ವಾಹನ ಖರೀದಿ ಯತ್ನ. ಕುಟುಂಬದಲ್ಲಿ ಒಮ್ಮತ, ಪತಿ ಪತ್ನಿಯರಲ್ಲಿ ಸಾಮರಸ್ಯ. ಉಡುಗೊರೆ ಪ್ರಾಪ್ತಿ. ಆಪ್ತರಿಂದ ಸಹಾಯ, ಪ್ರೀತಿ ಪಾತ್ರರಿಂದ ಶುಭವಾರ್ತೆ, ಹಣ ಹೂಡಿಕೆ ಯತ್ನ. ಶುಭದಿನ: 16; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಆರಂಭದಲ್ಲಿ ಚಂಚಲ ಮನಸ್ಸು. ನಿರೀಕ್ಷೆಗೂ ಮೀರಿದ ಖರ್ಚು. ಆತಂಕ ಉಂಟಾಗುವ ಘಟನೆಗಳು. ಕಾರ್ಯಗಳಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ, ಕುಟುಂಬದಲ್ಲಿ ಅಶಾಂತಿ. ವಾರದ ಮಧ್ಯಭಾಗದಿಂದ ಚೇತರಿಕೆ. ಆಪ್ತರಿಂದ ಸಹಾಯ. ಯತ್ನಿಸಿದ ಕಾರ್ಯದಲ್ಲಿ ಸಿದ್ಧಿ. ವ್ಯಾಪಾರಗಳಲ್ಲಿ ಲಾಭ. ಕುಟುಂಬ ಸೌಖ್ಯ. ಶುಭದಿನ: 15; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಸಂತೋಷ. ಇಷ್ಟಾರ್ಥ ಸಿದ್ಧಿ. ಪ್ರೀತಿ ಪಾತ್ರರ ಜೊತೆ ವಿಚಾರ ವಿನಿಮಯ. ಕೈಹಾಕಿದ ಕಾರ್ಯಗಳಲ್ಲಿ ಯಶಸ್ಸು. ಗೌರವ ಮತ್ತು ಪ್ರಶಂಸೆ ಪ್ರಾಪ್ತಿ. ಕ್ರಯ ವಿಕ್ರಯಗಳಲ್ಲಿ ಪ್ರಗತಿ. ವಾರದ ಮಧ್ಯಭಾಗದಲ್ಲಿ ಒತ್ತಡ. ಆರೋಗ್ಯದಲ್ಲಿ ವ್ಯತ್ಯಾಸ. ವ್ಯಾಪಾರದಲ್ಲಿ ನಷ್ಟ. ವಾರಾಂತ್ಯದಲ್ಲಿ ಒತ್ತಡ ನಿವಾರಣೆ. ಶುಭದಿನ: 12; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ